ಕನ್ನಡ ಶೀಘ್ರಲಿಪಿ ಪುಸ್ತಕಗಳು ದೊರೆಯದಿರುವುದು

೨೩೧ (೭೫೫) ಶ್ರೀ ಪಿ.ಎಸ್. ರಾಣೆ (ಕಾರವಾರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಸರಕಾರದಿಂದ ಪ್ರಕಟವಾಗಿರುವ ಕನ್ನಡ ಶೀಘ್ರಲಿಪಿ ಪುಸ್ತಕಗಳು ವಿದ್ಯಾರ್ಥಿಗಳಿಗೆ ದೊರಕದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಖಾಸಗಿಯವರ ಪುಸ್ತಕಗಳನ್ನು ಪುರಾಣ ಮಾಡುವ ಸಲುವಾಗಿಯೇ ಸರ್ಕಾರದವರ ಪ್ರಕಟಣೆ ದೊರಕದಂತೆ ಮಾಡಿರುವುದು ನಿಜವಲ್ಲವೇ?

ಈ) ಹಾಗಿದ್ದಲ್ಲಿ, ಈ ಅಭಾವಕ್ಕೆ ಕಾರಣವಾದವರ ವಿರುದ್ಧ ಸರ್ಕಾರದವರು ಸೂಕ್ತ ಕ್ರಮ ಕೈಕೊಳ್ಳುವರೇ?

ಉ) ಈಗಲಾದರೂ ಸರ್ಕಾರದವರು ಅಧಿಕೃತ ಕನ್ನಡ ಶೀಘ್ರಲಿಪಿ ಪುಸ್ತಕಗಳು ದೊರೆಯುವಂತೆ ಕ್ರಮ ಕೈಗೊಳ್ಳುವರೇ ?

ಶ್ರೀ ಎಂ. ರಘುಪತಿ (ಮಾನ್ಯ ಶಿಕ್ಷಣ ಸಚಿವರು).—

ಅ) ಹೌದು.

ಆ) ಹೌದು.

ಇ) ಇದು ನಿಜವಲ್ಲ.

ಈ) ''ಇ'' ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಕನ್ನಡ ಶೀಘ್ರಲಿಪಿ ಪುಸ್ತಕಗಳನ್ನು ಆದಷ್ಟು ಜಾಗ್ರತೆಯಾಗಿ ಅಚ್ಚು ಮಾಡಿಸಿ ಒದಗಿಸಲಾಗುವುದು.

ಶ್ರೀ ಪಿ.ಎಸ್. ರಾಣೆ.—ಅಧ್ಯಕ್ಷರೇ, ನನ್ನ ಮೊದಲ ಪ್ರಶ್ನೆ ಹಾಗೂ ಎರಡನೇ ಪ್ರಶ್ನೆಗಳಿಗೆ ''ಹೌದು'' ಎಂದು ಉತ್ತರ ಕೊಟ್ಟಿದ್ದಾರೆ. ಹಾಗೂ ಖಾಸಗಿಯವರು ಪುಸ್ತಕಗಳನ್ನು ಪುರಾಣ ಮಾಡುವ ಸಲುವಾಗಿಯೇ ಸರ್ಕಾರದವರ ಪ್ರಕಟಣೆ ದೊರಕದಂತೆ ಮಾಡಿರುವುದು ನಿಜವಲ್ಲವೇ ಎಂಬ ಪ್ರಶ್ನೆಗೆ ನಿಜವಲ್ಲವೆಂದು ಹೇಳಿದ್ದಾರೆ. ಆದರೆ ನಾನು ಒಂದು ಪ್ರಶ್ನೆ ಕೇಳುತ್ತೇನೆ. ಸರ್ಕಾರದಿಂದ ಪ್ರಕಟವಾಗಿರುವ ಪಠ್ಯಪುಸ್ತಕ ಎಷ್ಟು ವರ್ಷಗಳಿಂದ ಪೇಟೆಯಲ್ಲಿ ದೊರಕುತ್ತಾ ಇಲ್ಲ? ಹಾಗೂ ಖಾಸಗಿಯವರು ಪ್ರಕಟಿಸುವ ಪುಸ್ತಕ ಪೇಟೆಯಲ್ಲಿ ಯಥೇಚ್ಛವಾಗಿ ದೊರೆಯುತ್ತಾ ಇದೆಯೇ? ಬೆಂಗಳೂರಿನ ವಿನಾಯಕ ವಾಣಿಜ್ಯ ವಿದ್ಯಾ ಶಾಲೆಯಲ್ಲಿ ಸರ್ಕಾರ ಪ್ರಕಟ ಮಾಡಿದ ಈ ಕನ್ನಡ ಶೀಘ್ರಲಿಪಿ ಪಠ್ಯಪುಸ್ತಕವನ್ನು ಫೋಟೋಸ್ಟ್ಯಾಟ್ ಕಾಪಿ ಮಾಡಿ ೧೦ ರೂಪಾಯಿ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ, ಅಧ್ಯಕ್ಷರೇ, ಇವತ್ತು ಒಂದು ಪೇಜ್ ಫೋಟೋಸ್ಟ್ಯಾಟ್ ಮಾಡಬೇಕಾದರೆ ಕನಿಷ್ಟ ೫೦ ಪೈಸೆ ಖರ್ಚು ಆಗುತ್ತದೆ. ಈ ೧೪೪ ಪುಟಗಳು ಇರುವ ಪಠ್ಯಪುಸ್ತಕವನ್ನು ಫೋಟೋಸ್ಟ್ಯಾಟ್ ಮಾಡಿ ಖಾಸಗಿಯವರು ೧೦ ರೂಪಾಯಿಗಳಿಗೆ ಮಾರಬೇಕಾದರೆ ಏನೋ ಅವ್ಯವಹಾರ ನಡೆದಿದೆ ಎಂದು ಸ್ಪಷ್ಟವಾಗುತ್ತದೆ. ಏಕೆಂದರೆ ಇಡೀ ಪುಸ್ತಕವನ್ನೇ ಫೋಟೋಸ್ಟ್ಯಾಟ್ ಮಾಡುತ್ತಿದ್ದಾರೆ. ಈ ಕೆಲಸ ಸರ್ಕಾರಿ ಕಛೇರಿಯಲ್ಲಿ ನಡೆಯುತ್ತಿದೆ. ವಿನಾಯಕ ವಾಣಿಜ್ಯ ವಿದ್ಯಾಶಾಲೆಯಲ್ಲಿ ಇರುವವರು ಕಾರ್ಪೋರೇಷನ್ ಕಛೇರಿಯಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರ್ ಆಗಿ ಕೆಲಸ ಮಾಡುತ್ತಿದ್ದಾರೆ. ಇವರು ವಿಧಾನಸೌಧದಲ್ಲಿನ ಕಛೇರಿಯಲ್ಲಿರುವ ಫೋಟೋಸ್ಟ್ಯಾಟ್ ಯಂತ್ರವನ್ನು ದುರುಪಯೋಗ ಪಡಿಸಿಕೊಂಡು ಇದನ್ನು ಕಾಪಿ ಮಾಡಿಸುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ, ಇದು ನನ್ನ ಗಮನಕ್ಕೆ ಬಂದಿಲ್ಲ. ಸದಸ್ಯರು ಇದನ್ನು ಗಮನಕ್ಕೆ ತಂದಿದ್ದಾರೆ. ಇದರ ಬಗ್ಗೆ ತನಿಖೆ ಮಾಡಿಸುತ್ತೇನೆ. ನಿಜವಾಗಿ ಯಾರೇ ಇರಲಿ ಅವರು ಶಿಕ್ಷೆಗೆ ಗುರಿಯಾಗುತ್ತಾರೆಂದು ನಾನು ಹೇಳುತ್ತೇನೆ.

ಶ್ರೀ ಪಿ. ಎಸ್. ರಾಣಿ.—ಸರ್ಕಾರದಿಂದ ಪ್ರಕಟವಾಗುವ ಕನ್ನಡ ಶೀಘ್ರಲಿಪಿ ಪಠ್ಯಪುಸ್ತಕ ಯಾವಾಗ ವಿದ್ಯಾರ್ಥಿಗಳಿಗೆ ದೊರಕುವ ಹಾಗೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಂ. ರಘುಪತಿ.—ಇನ್ನು ಒಂದು ತಿಂಗಳಲ್ಲಿ ವ್ಯವಸ್ಥೆ ಮಾಡುತ್ತೇನೆ.

ಕಾಪು ಕ್ಷೇತ್ರಕ್ಕೆ ಗ್ರಾಮಸೇವಕರನ್ನು ನೇಮಿಸುವುದು

೨೩೨ (೧೫೪೪) ಶ್ರೀ ವಸ ತ ವಿ. ಸಾಲಿಯನ್ (ಕಾಪು).—ಮಾನ್ಯ ಗ್ರಾಮಿಣಾಭಿವೃದ್ಧಿ, ಪಂಚಾಯತ್‌ರಾಜ್ ಹಾಗೂ ಹಿಂದುಳಿದ ವರ್ಗಗಳ ಮಂತ್ರಿಗಳು ಈ ಕಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೇ:—

ಕಾಪು ಕ್ಷೇತ್ರದಲ್ಲಿ ಸುಮಾರು ೩೬ ಗ್ರಾಮ (ಕಂದಾಯ) ಗಳಿದ್ದು ಈ ಗ್ರಾಮಗಳಿಗೆ ಗ್ರಾಮ ಸೇವಕರನ್ನು (ಕೃಷಿಯ ಬಗ್ಗೆ) ನೇಮಕ ಮಾಡದಿರಲು ಕಾರಣವೇನು? ಮತ್ತು ಅವರನ್ನು ಯಾವಾಗ ನೇಮಕ ಮಾಡಲಾಗುವುದು?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಿಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವರ್ಕ್ಸ್ ಸಚಿವರು).—

ದಿ. ೨೪/೨೫–೬–೬೫ರ ಮಂಗಳೂರು ಜಿಲ್ಲಾಧಿಕಾರಿಗಳ ನಡೆಪಳಿ ಸಂ. ಸಿಡಿಪಿ ಇಎಸ್‌ಟಿ ೧೯/೬೪–೬೫ರ ಪ್ರಕಾರ " ಕಾಪು " ಕ್ಷೇತ್ರಕ್ಕೆ ಈಗಾಗಲೇ ಗ್ರಾಮ ಸೇವಕರನ್ನು ನೇಮಕ ಮಾಡಲಾಗಿದೆ.

ಶ್ರೀ ವಸಂತ ವಿ. ಸಾಲಿಯಾನ್.—ಅಧ್ಯಕ್ಷರೇ, ಕಾಪು ಕ್ಷೇತ್ರಕ್ಕೆ ಎಷ್ಟು ಗ್ರಾಮಸೇವಕರನ್ನು ನೇಮಕ ಮಾಡಲಾಗಿದೆ ? ಉಡುಪಿ ತಾಲ್ಲೂಕಿನಲ್ಲಿ ಸುಮಾರು ೬೦ ಪೋಸ್ಟ್‌ಗಳು ಇದ್ದು ಅದರಲ್ಲಿ ೪೦ ಪೋಸ್ಟ್‌ಗಳು ಖಾಲಿ ಇವೆ. ಈ ೪೦ನ್ನೂ ನೀವು ಯಾವಾಗ ಭರ್ತಿ ಮಾಡುತ್ತೀರಿ? ಈ ಇಲಾಖೆಯಲ್ಲಿ ಒಂದು ಕಡೆ ತಾಲ್ಲೂಕು ಅಭಿವೃದ್ಧಿ ಮಂಡಲಿಯಲ್ಲಿ ಕೆಲಸ ಮಾಡುವಂತಹ ಗ್ರಾಮ ಸೇವಕರು ಇದ್ದಾರೆ. ಮತ್ತೊಂದು ಕಡೆ ಅಗ್ರಿಕಲ್ಚರಲ್ ಆಫಿಸ್ಟೆಂಟ್ಸ್ ಇದ್ದಾರೆ. ಇವರನ್ನು ನಮ್ಮ ಜಿಲ್ಲೆಗೆ ಭರ್ತಿ ಮಾಡುವ ಸಂದರ್ಭದಲ್ಲಿ ಸುಮಾರು ೮೦ ಜನರನ್ನು ನಮ್ಮ ಜಿಲ್ಲೆಗೆ ಎಂದರೆ ದಕ್ಷಿಣ ಕನ್ನಡ ಜಿಲ್ಲೆಗೆ ಮಾಡುವ ಸಂದರ್ಭದಲ್ಲಿ ಗುಲ್ಬರ್ಗಾದಿಂದ, ಬೆಳಗಾಂನಿಂದ, ಧಾರವಾಡದಿಂದ ಈ ಜಿಲ್ಲೆಗೆ ಜನರನ್ನು ನೇಮಕ ಮಾಡಿದ್ದಾರೆ. ತುಳು ಭಾಷೆಯನ್ನು ಮಾತನಾಡುವ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ರೈತರ ಭಾಷೆ ಆ ಜಿಲ್ಲೆಗಳಿಂದ ಬಂದಂತಹ ಅಗ್ರಿಕಲ್ಚರಲ್ ಅಸಿಸ್ಟೆಂಟ್ಸ್‌ಗೆ ಗೊತ್ತಾಗುತ್ತಾ ಇಲ್ಲ. ಇದನ್ನು ಸರ್ಕಾರ ಯಾವ ರೀತಿ ಪರಿಶೀಲನೆ ಮಾಡುತ್ತದೆ? ದಕ್ಷಿಣ ಕನ್ನಡದಲ್ಲಿಯೇ ಇರತಕ್ಕ ಜನರನ್ನು ಈ ನೌಕರಿಗೆ ಏತಕ್ಕೆ ತುಂಬಲಿಲ್ಲ?

ಶ್ರೀ ಬಿ.ಆರ್. ಯಾವಗಲ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಪ್ರಥಮ ಪ್ರಶ್ನೆಗೆ ಹೇಳುವುದಾದರೆ, ಒಂದು ತಾಲ್ಲೂಕಿಗೆ ೧೦ ಜನ ಗ್ರಾಮಸೇವಕರ ಪ್ರಕಾರ ನೇಮಕ ಮಾಡಲಾಗಿದೆ. ಉಡುಪಿ ಕ್ಷೇತ್ರದಲ್ಲಿ ೬೦ ಜಾಗಗಳು ಖಾಲಿ ಇವೆಯೆಂದು ಹೇಳುತ್ತಿರುವುದನ್ನು ನೋಡಿದರೆ ಬಹುಶಃ ಅವರು ಕೃಷಿ ಸಹಾಯಕರ ಬಗ್ಗೆ ಪ್ರಶ್ನೆಯನ್ನು ಕೇಳುತ್ತಿದ್ದಾರೆಂದು ಅನ್ನಿಸುತ್ತದೆ. ಈಗ ಏನು ಗ್ರಾಮಸೇವಕರು ಬಂದಿದ್ದಾರೆ ಇವರನ್ನು ರಾಜ್ಯದ ಎಲ್ಲ ಕ್ಷೇತ್ರಗಳಿಗೂ ನೇಮಕಾತಿ ಮಾಡುವಾಗ ಮಂಗಳೂರು ಕ್ಷೇತ್ರದಲ್ಲಿ ಕಡಿಮೆ ಸಂಖ್ಯೆಯಲ್ಲಿದ್ದುದರಿಂದ ಬೇರೆ ಬೇರೆ ಕಡೆಗಳಿಂದ ಇವರನ್ನು ಆ ಜಿಲ್ಲೆಗೆ ಹಾಕಲಾಗಿದೆ ಆದರೆ ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ ಆ ಸಮಸ್ಯೆ ಬಹುಶಃ ಬರಲಾರದೆಂದು ಅನಿಸುತ್ತದೆ.

ಶ್ರೀ ವಸಂತ ವಿ. ಸಾಲಿಯಾನ.—ನಮ್ಮ ಕಾಪು ಕ್ಷೇತ್ರಕ್ಕೆ ಎಷ್ಟು ಜನರನ್ನು ನೇಮಕ ಮಾಡಿದ್ದೀರಿ ಎಂಬುದನ್ನು ಕೊನೆಗೆ ಹೇಳಲಿಲ್ಲ. ೫೪ ಮಂದಿ ಬೇರೆ ಬೇರೆ ಜಿಲ್ಲೆಗಳಿಂದ ಬಂದಿದ್ದಾರೆ. ಅವರನ್ನು ಹಾಕುವ ಬದಲು ನಮ್ಮ ಜಿಲ್ಲೆಯವರನ್ನೇ ಇಲ್ಲಿಗೆ ವರ್ಗ ಮಾಡಿದ್ದರೆ ಅನುಕೂಲವಾಗುತ್ತಿತ್ತು. ಆದರೆ ನಮ್ಮ ಕಾರ್ಯಕರ್ತರನ್ನು ಬೇರೆ ಬೇರೆ ಕಡೆಗೆ ವರ್ಗ ಮಾಡಿದ್ದಾರೆ.